ಅಸಲು ದಾವಾ ಸಂಖ್ಯೆ 149/2016 ಪಿ.ಡಬ್ಲ್ಯೂ 1

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ 02-12-2021

ಪಾಟೀ ಸವಾಲು ಃ ಶ್ರೀ ಪಿ.ಸಿ.ಎಂ. ನ್ಯಾಯಾವಾದಿಗಳಿಂದಃ

ನಮ್ಮ ತಂದೆ ದಾಸೇಗೌಡ ಇವರಿಗೆ ಇಬ್ಬರು ಮಕ್ಕಳು ಎಂದರೆ ಸಾಕ್ಷಿಯು ನಮ್ಮ ತಂದೆಗೆ ಇಬ್ಬರು ಹೆಂಡತಿಯರು ತಾನು ಮೊದಲನೆ ಹೆಂಡತಿ ಮಗ ಮತ್ತು ಇನ್ನೊಬ್ಬರು ರಾಮಚಂದ್ರರವರು 2 ನೇ ಹೆಂಡತಿ ಮಗ. ನಮ್ಮ ತಂದೆ ಇದ್ದಾಗ ನಮ್ಮ ಆಸ್ತಿಗಳನ್ನು ನಾನು ಮತ್ತು ನನ್ನ ತಮ್ಮ ರಾಮಚಂದ್ರರವರು ಪಂಚಾಯಿತಿ ಪಾಲು ಪರಿಕತ್ತನ ಮೂಲಕ ಸುಮಾರು 25 ವರ್ಷಗಳ ಹಿಂದೆ ಭಾಗಮಾಡಿಕೊಂಡಿರುತ್ತೇವೆ. ಸದರಿ ಪಂಚಾಯಿತಿ ಪಾಲುಪರಿಕತ್ನಲ್ಲಿ ಒಟ್ಟು 03 ಜಮೀನುಗಳು ಬಂದವು ಅವುಗಳ ಸರ್ವೆ ನಂ. 42/1 ಎ, ರಲ್ಲಿ 1 ಎಕರೆ 1 ಗುಂಟೆ, ಸರ್ವೆ ನಂ. 42/1 ಪಿ ರಲ್ಲಿ ರಲ್ಲಿ 1 ಎಕರೆ 1 ಗುಂಟೆ, ಮತ್ತು ಸರ್ವೆ ನಂ.35 ರಲ್ಲಿ 9 ಗುಂಟೆ ಮತ್ತು ಸರ್ವೆ ನಂ. 51 ರಲ್ಲಿ 8 ಗುಂಟೆ ಜಮೀನು ಬಂದಿರುತ್ತದೆ. ದಾವಾ ಸ್ವತ್ತು ಅಜ್ಜಿಯಾಸ್ತಿಯಾಗಿರುವುದರಿಂದ ರಾಮಚಂದ್ರರವರಿಗೆ ಅದರಲ್ಲಿ ಯಾವುದೇ ಭಾಗವನ್ನು ನೀಡಿಲ್ಲ. ದಾವಾ ಸ್ವತ್ತು ನಮ್ಮ ಅಜ್ಜಿಯಿಂದ ನಮ್ಮ ತಂದೆ ಗೆ ಬಂದಿರುತ್ತದೆ ನಂತರ ನಮ್ಮ ತಂದೆಯಿಂದ ಪೂರ್ತಿ ಜಮೀನು ನನ್ನ ಹೆಸರಿಗೆ ವರ್ಗವಣೆಯಾಗಿರುತ್ತದೆ. ದಾವಾ ಸ್ವತ್ತು ನಮ್ಮ ಅಜ್ಜಿಯಿಂದ ಬಂದ ಸ್ವತ್ತು ಎಂದು ನನ್ನ ವಾದ ಪತ್ರದಲ್ಲಿ ಹೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸದರಿ ಪಂಚಾಯಿತಿ ಪಾರಿಕತ್ ನ ಮುಖಾಂತರ ರಾಮಚಂದ್ರರವರಿಗೆ ಒಟ್ಟು 04 ಜಮೀನುಗಳು ಬಂದಿರುತ್ತವೆ. ಸದರಿ ಪಂಚಾಯಿತಿ ಪಾಲುಪರಿಕತ್‌ನ ಪ್ರಕಾರ ನಮ್ಮ ಹೆಸರಿನಲ್ಲಿ ಪಹಣಿ ಬಂದಿರುತ್ತದೆ. ಈ ದಾವೇಯನ್ನು ಹಾಕುವ ಕಾಲಕ್ಕೆ ಪಂಚಾಯಿತ್ ಪಾರಿಕತ್‌ನ ದಾಖಲೆಯನ್ನು ನೀಡಿರುವುದಿಲ್ಲ. ನಾನು ಉದ್ದೇಶ ಪೂರ್ವಕವಾಗಿ ಮ್ಯೂಟೇಷನ್ ರಿಜಿಸ್ಟರ್ ಅನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ಮ್ಯೂಟೇಷನ್ ರಿಜಿಸ್ಟರ್ ಅನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ಯಾವುದೇ ತೊಂದರೆ ಇಲ್ಲ. ನಮ್ಮ ತಂದೆಯ ಹೆಸರಿನಲ್ಲಿ ಇದ್ದ ದಾವಾ ಸ್ವತ್ತಿನ 2 ಎಕರೆ 2 ಗುಂಟೆ ಜಮೀನಿನಲ್ಲಿ ನನಗೆ 1 ಎಕರೆ 1 ಗುಂಟೆ ಮತ್ತು ನಮ್ಮ ತಮ್ಮ ರಾಮಚಂದ್ರ ಅವರಿಗೆ 1 ಎಕರೆ 1 ಗುಂಟೆ ಬಂದಿರುತ್ತದೆ ಎಂದರೆ ಸರಿಯಲ್ಲ. ನಿಪಿ.3 ರ ಪ್ರಕಾರ 1 ಎಕರೆ 1 ಗುಂಟೆ , ಇದರ ಮ್ಯೂಟೇಷನ್ ರಿಜಿಸ್ಟರ್ ಸಂಖ್ಯೆ ಐ. ಹೆಚ್.ಸಿ 2/97-98 ರ ಪ್ರಕಾರ

ಬಂದಿರುತ್ತದೆ ಎಂದರೆ ಸರಿಯಲ್ಲ. ನಿಪಿ.2 ರ ಲ್ಲಿ ಹೇಳಿರುವ 1 ಎಕರೆ ½ ಗುಂಟೆ ಜಮೀನು , ಎಂ.ಆರ್. 50/2006-2007 ದಿಃ 02-08-2007 ರ ವಿಭನೆಯ ಪ್ರಕಾರ ಬಂದಿರುತ್ತದೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ನನಗೆ ಗೊತ್ತಿರುವುದಿಲ್ಲ ಆದರೆ 2 ನೇ ಪ್ರತಿವಾದಿ ಶಿವಣ್ಣ ನಮ್ಮ ಜಮೀನಿನ ಪಕ್ಕದಲ್ಲಿರುತ್ತಾರೆ. 1 ನೇ ಪ್ರತಿವಾದಿ ನನ್ನ ಜಮೀನಿಗೆ ಸಂಬಂದಿಸಿದಂತೆ ಯಾವುದೇ ತೊಂದರೆಯನ್ನು ನೀಡಿಲ್ಲ. 1 ನೇ ಪ್ರತಿವಾದಿ ಸಲ್ಲಿಸಿರುವ ತಕರಾರಿನ್ನು ನಾನು ತಿಳಿದುಕೊಂಡಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ ದಂತೆ ಆರ್.ಟಿ.ಸಿ ಕೊಟ್ಟಿರುತ್ತೇನೆ ದಾವಾ ಸ್ವತ್ತಿನ ಪೂರ್ವಕ್ಕೆ-ಕುಳ್ಳೆಗೌಡರ ಬೊಮ್ಮೇಗೌಡ ಜಮೀನು ಪಶ್ಚಿಮಕ್ಕೆ- ಕರೀಗೌಡ ಜಮೀನು , ಉತ್ತರಕ್ಕೆ ದಾರಿ, ದಕ್ಷಿಣಕ್ಕೆ – ಸರ್ಕಾರಿ ಹಳ್ಳ ಇರುತ್ತದೆ. ದಾವಾ ಸ್ವತುಗಳ ಸರ್ವೆ ನಂಬರ್ ನಲ್ಲಿ 1 ಎಕರೆ 1 ಗುಂಟೆ ನನ್ನ ತಮ್ಮ ರಾಮಚಂದ್ರರವರಿಗೆ ಮತ್ತು 1 ಎಕರೆ ½ ಗುಂಟೆ ನನಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವೆರದು ಪೂರ್ತಿ ಜಮೀನು ತನಗೆ ಬಂದಿರುವುದಾಗಿ ಹೇಳುತ್ತಾರೆ. ಪಂಚಾಯಿತಿ ಪಾರಿಕತ್ತ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದರೆ ಸತ್ಯ ಸಂಗತಿ ಗೊತ್ತಾಗುತ್ತದೆ ಎಂದು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮತ್ತು ಸದರಿ ಪಂಚಾಯಿತಿ ಪಾಲುಕತ್ತಿನಲ್ಲಿ ಎರಡು ಜಮೀನುಗಳಿಗೆ ಬೇರೆ ಬೇರೆ ಚೆಕ್ಕು ಬಂದಿ ನಮೂದಿಸಿದ್ದಾರೆ ಎಂದರೆ ಸರಿಯಲ್ಲ. ಎಂ.ಆರ್. 17/97-98 ರ ಪ್ರಕಾರ ನಮ್ಮ ತಮ್ಮ ರಾಮಚಂದ್ರರವರಿಗೆ 1 ಎಕರೆ 1 ಗುಂಟೆ ದಾವಾ ಸರ್ವೆ ನಂಬರ್ ನಲ್ಲಿ ಬಂದಿರುತದೆ ಎಂದರ ಸರಿಯಲ್ಲ. ದಿಃ 15-04-2000 ರಲ್ಲಿ ಸದರಿ ರಾಮಚಂದ್ರರವರು 1 ನೇ ಪ್ರತಿವಾದಿಗೆ ನೊಂದಾಯಿತ ಅಡಮಾನ ಪತ್ರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ತದನಂತರ ಸದರಿ ಸ್ವತ್ತನ್ನು ಸಾಲ ಮರುಪಾವತಿ ಮಾಡಲು ಆಗದ ಕಾರಣ 1 ನೇ ಪ್ರತಿವಾದಿಗ ದಿನಾಂಕ 15-07-2002 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಪೂರ್ವಕ್ಕೆ - ಚೆನ್ನಯ್ಯನ ಬೊಮ್ಮರವರ ಜಮೀನು , ಪಶ್ಚಿಮಕ್ಕೆ - ಗೌಡೇಗೌಡ ಎನ್ನುವವರ ಜಮೀನು , ಉತ್ತರಕ್ಕೆ - ವಾದಿಯ ಉಳಿದ ಜಮೀನು ಮತ್ತು - ದಕ್ಷಿಣಕ್ಕೆ - ಹಳ್ಳ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಸದರಿ ಸ್ವತ್ತಿಗೆ ಸಂಬಂಧಿಸ ದಂತೆ ಎಂ. ಆರ್. ಆಗಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸದರಿ ಸ್ವತ್ತಿಗೆ ಸಂಬಂದಪಟ್ಟಂತೆ 1 ನೇ ಪ್ರತಿವಾದಿ ಕಂದಾಯವನ್ನು ಕಟ್ಟಿಕೊಂಡು ಸ್ವಾ ದೀನದಲ್ಲಿದ್ದಾರೆ

ಎಂದರೇ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕಟ್ಟಿರುವ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ಯಾವುದೇ ತೊಂದರೆ ಇಲ್ಲ.

ನನ್ನ ತಮ್ಮನ ಮಕ್ಕಳು ರಾಮಚಂದ್ರ ಮತ್ತು ಇತರರ ವಿರುದ್ಧ ಅಸಲು ದಾವಾ ಸಂಖ್ಯೆ 123/2007 ವಿಭಾಗವನ್ನು ಕೋರಿ ದಾವೆಯನ್ನು ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಈ ದಾವೆಯ ಸರ್ವೆ.ನಂ.42/1-ಎ-ಪಿ2 ಸೇರಿಸಲಾಗಿತ್ತು ಎಂದರೆ ಸರಿಯಲ್ಲ. ಸದರಿ ಸ್ವತ್ತು ಪಾಪೇಗೌಡ ಇವರ ಸ್ವತ್ತು ಎಂದು ಮೇಲ್ಕಾಣಿಸಿದ ಮೂಲ ದಾವೆ ಯಲ್ಲಿ ಹೇಳಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ್ ನಲ್ಲಿ ನನಗೆ ಕೇವಲ 1 ಎಕರೆ 1 ಗುಂಟೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ . ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಸಂಪೂರ್ಣ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಸಾ. ಹೇ. ಬಿ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ